ದಿಃ **27-02-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀಮತಿ ಗಿರಿಜಾ ವಕೀಲರಿಂದಃ**

ನನಗೆ 6 ನೇ ಪ್ರತಿವಾದಿಯ ಪರಿಚಯ ಇದೆ. ಪ್ರತಿವಾದಿ 7(1), 7(2) ಸುಜಾತಾ ಮತ್ತು ಮಾಲಿನಿ ಇವರ ಪರಿಚಯ ಇಲ್ಲ. ನನಗೆ ದಾವ ಆಸ್ತಿಯ ಸರ್ವೇ ನಂಬರ ಹೇಳಲಾಗುವುದಿಲ್ಲ. ದಾವ ಆಸ್ತಿ ಒಟ್ಟು 20 ಎಕರೆ ಇದೆ. ಸಣ್ಣ ಬಡೆಪ್ಪ ಇವರಿಗೆ ನಾವು 3 ಜನ ಮಕ್ಕಳು ಇದ್ದೇವೆ. ದಾವ ಆಸ್ತಿ ಆಂಜಿನೇಯ ಇವರ ಆಸ್ತಿ ಎಂದರೆ ನಿಜ. ಆಂಜಿನೇಯ, ಬಡ್ಡೆಪ್ಪ ಮತು ಮಾರುತಿ ಇವರು ತಮ್ಮ ಆಸ್ತಿಯನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಿಜ್ಜ. ಸಾಕ್ಷಿ ತನಗೆ ಗೊತ್ತಾಗದಂತೆ ಮಾರಾಟ ಮಾಡಿರುವುದಾಗಿ ನುಡಿಯುತ್ತಾರೆ. ಆ ರೀತಿ 2009–10 ರಲ್ಲಿ ಜಮೀನನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮಿನನು 6 ನೇ ಪ್ರತಿವಾದಿ ಕೃಷಿಯೇತರ ಜಮೀನಾಗಿ ಮಾರ್ಪಡಿಸಿಕೊಂಡು ಅದರಲಿ ನಿವೇಶನಗಳನ್ನು ಮಾಡಿರುತಾರೆ ಎಂದರೆ ನನಗೆ ಗೊತ್ತಿಲ್ಲ.

2. 6 ನೇ ಪ್ರತಿವಾದಿ ಇವರು 7(1) ಮತ್ತು 7(2) ಪ್ರತಿವಾದಿಯರೊಂದಿಗ ಮಾಡಿಕೊಂಡ ಕರಾರು ಪತ್ರ ನನಗೆ ಗೊತ್ತಿಲ್ಲ. ಸದರಿ 7(1) ಮತ್ತು 7(2) ಪ್ರತಿವಾದಿಯರು ತಮ್ಮ ಗಂಡನ ಹೆಸರುಗಳಿಗೆ ಅದಿಕಾರ ಪತ್ರ ಬರೆದು ನೀಡಿದ ವಿಷಯ ನನಗೆ ಗೊತ್ತಿಲ್ಲ. 2017–18 ರಲ್ಲಿ ದಾವ ಆಸ್ತಿಯನ್ನು ಕೃಷಯೇತರ ಜಮೀನಾಗಿ ಮಾರ್ಪಡಿಸಿದ ನಂತರ ನಿವೇಶನಗಳ ಕುರಿತು ಪಹಣಿ ಪತ್ರಿಕೆಗಳಲ್ಲಿ ನಮೂದಿಸಿದ್ದು ಕಂಡು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವ ಆಸ್ತಿಯಲ್ಲಿ ಈಗ ಸುಮಾರು 60 ಮನೆಗಳನ್ನು ಕಟ್ಟಲಾಗಿದೆ ಎಂದರೆ ಸಾಕ್ಷಿ ತಾನು ನೋಡಿಲ್ಲ ಎಂದು ನುಡಿಯುತ್ತಾರೆ. ದಾವ ಆಸ್ತಿ ಈಗ ಜಮೀನಾಗಿ ಉಳಿದಿಲ್ಲ ಅಲ್ಲಿ ಪ್ಲಾಟುಗಳು ಆಗಿ ಮನೆಗಳು ಆಗಿವೆ ಎಂದರೆ ಸಾಕ್ಷಿ ನಿವೇಶನಗಳು ಆಗಿರಬಹುದು ಆದರೆ ಮನೆಗಳು ಆಗಿಲ್ಲ ಎಂದು ನುಡಿಯುತ್ತಾರೆ.

3. ನಿಪಿ–5 ಖರೀದಿ ಪತ್ರಕ್ಕೆ ಲಕ್ಷ್ಮಮ್ಮ ಅಲಿಯಾಸ್ ಚೊಳಮ್ಮ, ಮಾರುತಿ, ಮೀನಾಕ್ಷಿ, ಪರಿಸಪ್ಪ ಮತು ಪರಸಮ್ಮ ಸಮ್ಮತಿ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರೆಲ್ಲರು ಸೇರಿ ದಾವ ಆಸ್ತಿಯನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದು ನನಗೆ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಯನ್ನು ಕಬಳಿಸುವ ಉದೇಶದಿಂದ ಸುಳು ದಾವೆ ದಾಖಲಿಸಿ ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ದಾವ ಆಸ್ತಿ ಜಮೀನು ಇದೆ ಎಂದು ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿಃ ಶ್ರೀ ಮಲ್ಲಿಕಾರ್ಜುನ ವಕೀಲರಿಂದಃ ವಕೀಲರು ಸಮಯ ಕೇಳಿದ್ದರಿಂದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ಓದಿ ಹೇಳಿ ಸಹಿಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.